**AW**-2

**ಸಾಕ್ಷಿಯನ್ನು ದಿನಾಂಕ 20.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮೇಲ್ಮನವಿದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತದೆ ಮತ್ತು ಅದಕ್ಕೆ ನಾನು ನನ್ನ ಸಹಿ ಹಾಕಿರುತ್ತೇನೆ.

ದಿಃ 03.03.2023 ರಂದು ಮೇಲ್ಮನವಿದಾರರಾದ ನಿರಂಜನಾ ಪ್ರಣವ ಸ್ವರೂಪ ಶ್ರೀ ಇಮ್ಮಡಿ ಮಹಂತ್ ಸ್ವಾಮಿಗಳ ಪಟ್ಟಾಭಿಷ್ಷೇಕ ಮಹೋತ್ಸವದಲ್ಲಿ ನಾನು ಊರಿನ ಯಜಮಾನನಾಗಿ ಹಾಜರಾಗಿ ಸದರಿ ಪಟ್ಟಾಧಿಕಾರ ಸಂಪುಟಕ್ಕೆ ನಾನು ಸಾಕ್ಷಿ ಆಗಿ ಸಹಿ ಮಾಡಿರುತ್ತೇನೆ. ಸದರಿ ಪಟ್ಟಾಧಿಕಾರ ಸಂಪುಟವನ್ನು ನೋಡುತ್ತಿದ್ದು, ನನ್ನ ಸಹಿ ಗುರುತಿಸುತ್ತೇನೆ. ಸದರಿ ಪಟ್ಟಾಧಿಕಾರ ಸಂಪುಟವನ್ನು ವಿಚಾರಣಾ ನ್ಯಾಯಾಲಯದಲ್ಲಿ ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಸದರಿ ನಿಪಿ-1 ರ ದೃಢೀಕೃತ ನಕಲಿನಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಟ್ಟಾಧಿಕಾರ ಸಂಪುಟದ ದೃಢೀಕೃತ ನಕಲನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

**ಎದುರುದಾರರು ಏಕತರ್ಫಿ ಹಾಗೂ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

(**ತೆ**ರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ

**AW**-1

**ಸಾಕ್ಷಿಯನ್ನು ದಿನಾಂಕ 20.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮೇಲ್ಮನವಿದಾರರ ಪರ ವಕೀಲರಿಂದಃ**

ನಾನು ಈ ಮೇಲ್ಮನವಿಯ ಮೇಲ್ಮವಿದಾರನಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತದೆ ಮತ್ತು ಅದಕ್ಕೆ ನಾನು ನನ್ನ ಸಹಿ ಹಾಕಿರುತ್ತೇನೆ.

ಮೇಲ್ಮನವಿದಾರ ಪಟ್ಟಾಧಿಕಾರಮಹೋತ್ಸವ ಮತ್ತು ಧಾರ್ಮಿಕ ಪತ್ರಿಕೆ ಸಭೆಯ ಆಹ್ವಾನ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು, ನಮ್ಮ ಮಠದ ತೃತೀಯ ವರ್ಷದ ಮಹೋತ್ಸವ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**ಎದುರುದಾರರು ಏಕತರ್ಫಿ ಹಾಗೂ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

(**ತೆ**ರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ